# ಅದ್ವೈತಭಾವ



❁ ಹಿಂದಿನ ಋಷಿಗಳಿಗೆ ಬ್ರಹ್ಮಜ್ಞಾನ ದೊರೆತಿತ್ತು. ವಿಷಯಬುದ್ಧಿ ಲೇಶಮಾತ್ರವಿದ್ದರೂ ಬ್ರಹ್ಮಜ್ಞಾನ ದೊರಕುವುದಿಲ್ಲ. ಋಷಿಗಳು ಎಷ್ಟು ಕಷ್ಟ ತೆಗೆದುಕೊಳ್ಳುತ್ತಿದ್ದರು ಏನು ಕತೆ! ಬೆಳಗಾಗೆದ್ದು ಆಶ್ರಮ ಬಿಟ್ಟು ಹೊರಟುಹೋಗುತ್ತಿದ್ದರು. ಇಡೀ ದಿನವೆಲ್ಲಾ ಏಕಾಂಗಿಯಾಗಿ ಭಗವಂತನ ಧ್ಯಾನಚಿಂತನೆಯಲ್ಲೇ ಕಳೆಯುತ್ತಿದ್ದರು. ರಾತ್ರಿ ವೇಳೆ ಆಶ್ರಮಕ್ಕೆ ಹಿಂತಿರುಗಿ ಬಂದು ಎಲ್ಲೋ ಸ್ವಲ್ಪ ಫಲಮೂಲಾದಿಗಳನ್ನು ತಿನ್ನುತ್ತಿದ್ದರು. ರೂಪ, ಶಬ್ದ, ಸ್ಪರ್ಶ ಇವೇ ಮೊದಲಾದ ವಿಷಯ ವಸ್ತುಗಳ ಕಡೆ ಮನಸ್ಸು ಹೋಗದ ಹಾಗೆ ನೋಡಿಕೊಳ್ಳುತ್ತಿದ್ದರು. ಅಷ್ಟು ಕಷ್ಟ ತೆಗೆದುಕೊಳ್ಳುತ್ತಿದ್ದುದರಿಂದಲೇ ಅವರು ಬ್ರಹ್ಮ ತಮ್ಮ ಅಂತರ್ಯಾಮಿ ಎಂಬ ಅನುಭವ ಪಡೆಯುತ್ತಿದ್ದರು.

❁ ಜ್ಞಾನಿ 'ನೇತಿ' 'ನೇತಿ' ಮಾರ್ಗ ಅನುಸರಿಸಿ ವಿಷಯಬುದ್ಧಿಯನ್ನು ಪೂರ್ಣವಾಗಿ ತ್ಯಾಗ ಮಾಡುತ್ತಾನೆ. ಆಗ ಮಾತ್ರವೇ ಅವನಿಗೆ ಬ್ರಹ್ಮನ ಸಾಕ್ಷಾತ್ಕಾರ. ಇದು ಮೆಟ್ಟಿಲ ಸಾಲಿನ ಹಂತಗಳನ್ನು ಒಂದೊಂದಾಗಿ ಹಿಂದೆಬಿಟ್ಟು ಚಾವಣಿ ಮುಟ್ಟುವ ಹಾಗೆ. ಆದರೆ ವಿಜ್ಞಾನಿ ವಿಶೇಷ ರೀತಿಯಾಗಿ ಬ್ರಹ್ಮನೊಡನೆ ಬೆರೆತು ಇನ್ನೂ ವಿಶೇಷವಾದ ಅನುಭವ ಪಡೆಯುತ್ತಾನೆ. ಆತ ಅನುಭವ ಪಡೆದುಕೊಳ್ಳುತ್ತಾನೆ — ಚಾವಣಿ ಯಾವ್ಯಾವ ವಸ್ತುಗಳಿಂದ ಅಂದರೆ, ಇಟ್ಟಿಗೆ, ಸುಣ್ಣ, ಇಟ್ಟಿಗೆಚೂರು ಇವುಗಳಿಂದ ನಿರ್ಮಿತವಾಗಿವೆಯೊ, ಅದೇ ವಸ್ತುಗಳಿಂದ ಮೆಟ್ಟಿಲ ಸಾಲೂ ನಿರ್ಮಿತವಾಗಿದೆ ಎಂಬುದಾಗಿ. 'ನೇತಿ' 'ನೇತಿ' ಮಾರ್ಗವನ್ನು ಅನುಸರಿಸಿ ಯಾವ ವಸ್ತುವನ್ನು ಬ್ರಹ್ಮ ಎಂಬುದಾಗಿ ಅರಿತುಕೊಂಡನೊ, ಅದೇ ವಸ್ತು ಜೀವ ಜಗತ್ತಾಗಿಯೂ ಇರುವುದು ಎಂದು ಆತನ ಅರಿವಿಗೆ ಬರುತ್ತದೆ. ಯಾರು ನಿರ್ಗುಣನೋ ಆತನೇ ಸಗುಣ ಎಂಬುದಾಗಿ ವಿಜ್ಞಾನಿಗೆ ಕಂಡುಬರುತ್ತದೆ.

❁ ಜ್ಞಾನಯೋಗಿ ಜ್ಞಾನಮಾರ್ಗನಿಷ್ಠನಾಗಿ ಸರ್ವದಾ 'ನೇತಿ, ನೇತಿ' ಎಂಬ ವಿಚಾರದಲ್ಲಿ, ಅಂದರೆ 'ಬ್ರಹ್ಮ ಇದಲ್ಲ, ಅದಲ್ಲ, ಜೀವವಲ್ಲ, ಜಗತ್ತಲ್ಲ' ಎಂಬ ವಿಚಾರದಲ್ಲಿ ತೊಡಗಿರುತ್ತಾನೆ. ಈ ರೀತಿಯಾಗಿ ವಿಚಾರ ಮಾಡುತ್ತ ಮಾಡುತ್ತ ಮುಂದುವರಿದರೆ ಮನಸ್ಸು ಸ್ಥಿರವಾಗುತ್ತದೆ. ಬಳಿಕ ಮನಸ್ಸು ಲಯ ಹೊಂದುತ್ತದೆ, ಸಮಾಧಿಯುಂಟಾಗುತ್ತದೆ; ಆಗ ಬ್ರಹ್ಮಜ್ಞಾನ ದೊರೆಯುತ್ತದೆ. ಬ್ರಹ್ಮಜ್ಞಾನಿಯ ನಿಶ್ಚಿತಾಭಿಪ್ರಾಯ ಬ್ರಹ್ಮಸತ್ಯ ಜಗನ್ಮಿಥ್ಯಾ. ಈ ನಾಮರೂಪಗಳೆಲ್ಲ ಸ್ವಪ್ನದ ಹಾಗೆ ಮಿಥ್ಯಾ. ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣಿಸಲಾಗುವುದಿಲ್ಲ. ಆತನನ್ನು ಒಬ್ಬ ವ್ಯಕ್ತಿ ಎಂತಲೂ ಹೇಳಲಾಗುವುದಿಲ್ಲ. ಹೀಗೆಂದು ಜ್ಞಾನಿಗಳು – ವೇದಾಂತವಾದಿಗಳು ಹೇಳುತ್ತಾರೆ.

❁ ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡಿದ್ದರೆ ಮಾತ್ರ ಆತನ ಸಂಬಂಧವಾಗಿ ಯಥಾರ್ಥವಾಗಿ ಹೇಳಬಹುದು. ಯಾರಿಗೆ ಭಗವಂತನ ಸಾಕ್ಷಾತ್ಕಾರವಾಗಿದೆಯೋ, ಆತನಿಗೆ ಚೆನ್ನಾಗಿ ಗೊತ್ತಿದೆ, ಭಗವಂತ ಸಾಕಾರನೂ ಹೌದು, ನಿರಾಕಾರನೂ ಹೌದು — ಎಂಬುದು. ಆತ ಇನ್ನೂ ಏನೇನು ಆಗಿದ್ದಾನೋ ಅದನ್ನು ಹೇಳಲಾಗುವುದಿಲ್ಲ.

❁ ಭಗವಂತನ ದರ್ಶನವಾದ ನಂತರ ಗುರು–ಶಿಷ್ಯರ ಭೇದವಿರದು. ಅದು ಬಹಳ ತೊಡಕಿನ ಸನ್ನಿವೇಶವನ್ನು ಸೃಜಿಸುತ್ತದೆ. ಅಲ್ಲಿ ಗುರು–ಶಿಷ್ಯರು ಒಬ್ಬರನ್ನೊಬ್ಬರು ಗುರುತಿಸಲಾರರು. ಇದಕ್ಕಾಗಿಯೇ ಜನಕರಾಜ ಶುಕದೇವನಿಗೆ ಹೇಳಿದ: 'ನಿನಗೆ ಬ್ರಹ್ಮಜ್ಞಾನ ಬೇಕಾಗಿದ್ದರೆ ಮೊದಲು ಗುರುದಕ್ಷಿಣೆ ಕೊಡು.' ಏಕೆಂದರೆ, ಬ್ರಹ್ಮಜ್ಞಾನ ದೊರೆತನಂತರ ಈತ ಗುರು, ತಾನು ಶಿಷ್ಯ ಎಂಬ ಭೇದಬುದ್ಧಿ ಇರದು. ಭಗವಂತನ ಸಾಕ್ಷಾತ್ಕಾರವಾಗದೆ ಇರುವವರೆಗೆ ಮಾತ್ರ ಗುರು–ಶಿಷ್ಯ ಸಂಬಂಧ.

❁ ಬ್ರಹ್ಮ ಅವಾಙ್ಮನಸಗೋಚರ ಎಂಬುದಾಗಿ ವೇದಗಳಲ್ಲಿ ಹೇಳಿದೆ. ಜ್ಞಾನಸೂರ್ಯನ ತಾಪದಿಂದ ಹಿಮಗಡ್ಡೆಯಂತಹ ಭಗವಂತನ ಸಾಕಾರ ರೂಪ ಕರಗಿಹೋಗುತ್ತದೆ. ಬ್ರಹ್ಮಜ್ಞಾನ ದೊರೆತ ನಂತರ ಅಂದರೆ, ನಿರ್ವಿಕಲ್ಪಸಮಾಧಿ ದೊರೆತನಂತರ, ಅದರಲ್ಲಿ ಅದೇ ಅನಂತ ವಾಙ್ಮನಾತೀತ ಅರೂಪ ನಿರಾಕಾರ ಬ್ರಹ್ಮನ ದರ್ಶನ.

❁ ಪರಬ್ರಹ್ಮನ ಸ್ವರೂಪ ಏನೆಂಬುದಾಗಿ ಬಾಯಲ್ಲಿ ಹೇಳಲಾಗುವುದಿಲ್ಲ. ಅದರ ಸಂಬಂಧವಾಗಿ ಮಾತೇ ಹೊರಡುವ ಹಾಗಿಲ್ಲ. ಅನಂತವನ್ನು ಯಾರು ತಾನೇ ಮಾತಿನಿಂದ ವರ್ಣಿಸಬಲ್ಲರು? ಹಕ್ಕಿ ಎಷ್ಟೇ ಎತ್ತರಕ್ಕೆ ಹಾರಿಹೋದರೂ, ಅದು ಹಾರಿಹೋಗಬೇಕಾದ ಎತ್ತರ ಇನ್ನು ಉಳಿದುಕೊಂಡೇ ಇರುತ್ತದೆ.

❁ ಯಾವಾಗ ಭಗವಂತ ಸೃಷ್ಟಿ–ಸ್ಥಿತಿ–ಪ್ರಳಯ ಕಾರ್ಯಗಳನ್ನು ಮಾಡುತ್ತಾನೋ, ಆಗ ಆತನಿಗೇ ಸಗುಣಬ್ರಹ್ಮ ಅಥವಾ ಆದ್ಯಾಶಕ್ತಿ ಅಂತ ಹೆಸರು; ಯಾವಾಗ ಆತನನ್ನು ತ್ರಿಗುಣಾತೀತ ಎಂಬುದಾಗಿ ಭಾವಿಸುತ್ತೇವೆಯೋ, ಆಗ ಆತನಿಗೆ ವಾಙ್ಮನಾತೀತ ನಿರ್ಗುಣಬ್ರಹ್ಮ ಅಂತ ಹೆಸರು–ಪರಬ್ರಹ್ಮ ಅಂತ ಹೆಸರು.

❁ ಚಿದಾನಂದವನ್ನು ಆರೋಪಿಸಿಕೊಳ್ಳಿ. ನಿಮಗೂ ಆನಂದ ಉಂಟಾಗುತ್ತದೆ. ಚಿದಾನಂದ ಯಾವಾಗಲೂ ನಿಮ್ಮಲ್ಲಿ ಇದ್ದೇ ಇದೆ. ಅದು ಆವರಣ ವಿಕ್ಷೇಪಶಕ್ತಿಗಳಿಂದ ಕೇವಲ ಮುಚ್ಚಲ್ಪಟ್ಟಿದೆ. ವಿಷಯಾಸಕ್ತಿ ಕಡಿಮೆಯಾದಷ್ಟೂ ಭಗವಂತನಲ್ಲಿ ಪ್ರೀತಿ ಅಧಿಕವಾಗುತ್ತ ಬರುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ